# ಗಾಯವನ್ನು ತೊಳೆಯಿರಿ – ರೇಬೀಸ್ ಅನ್ನು ತಡೆಯಿರಿ

1. ರೇಬೀಸ್ ಅನ್ನುವುದು ಸಾವನ್ನು ತರುವ ಮಾರಕ ಖಾಯಿಲೆ.
2. ನಾಯಿ ಅಥವಾ ಇತರ ಪ್ರಾಣಿಗಳು ಕಚ್ಚುವುದರಿಂದ ಗೀರಿ ಘಾಯ ಮಾಡುವುದರಿಂದ ರೇಬೀಸ್ ಬರುತ್ತದೆ.
3. ಪ್ರಾಣಿಯ ಎಂಜಲಿನಲ್ಲಿರುವ ರೇಬೀಸ್ ವೈರಾಣು ಗಾಯದ ಮೇಲೆ ಸ್ವಲ್ಪ ತಗುಲಿದರೂ ಸಹ ನರಗಳ ಮೂಲಕ ಮೇಲುಭಾಗಕ್ಕೆ ಹೋಗಿ ಮಿದುಳನ್ನು ತಲುಪುತ್ತದೆ.
4. ಗಾಯವಾದ ತಕ್ಷಣ ಸುರುಯುತ್ತಿರುವ ನೀರಿನಲ್ಲಿ ಚೆನ್ನಾಗಿ ತೊಳೆದರೆ ಗಾಯದಲ್ಲಿರುವ ವೈರಾಣು ಕೊಚ್ಚಿಕೊಂಡು ಹೊರಬೀಳುವ ಸಾಧ್ಯತೆ ಇರುತ್ತದೆ.
5. ನೀರಿನ ಜೊತೆಗೆ ಚೆನ್ನಾಗಿ ಸೋಪನ್ನು ನೆರೆ ಬರಿಸಿ ಹಚ್ಚಿ ನಂತರ ನೀರಿನಲ್ಲಿ 15 ನಿಮಿಷಗಳ ಕಾಲ ತೊಳೆಯುತ್ತಿದ್ದರೆ ಬಹಳಷ್ಟು ವೈರಾಣುಗಳು ಸಾಯುತ್ತವೆ.
6. ಗಾಯವನ್ನು ತೊಳೆದ ನಂತರ ಆಂಟಿಸೆಪ್ಟಿಕ್-ಅಂದರೆ ಗಾಯವಾಗದಂತೆ ತಡೆಗಟ್ಟುವ ಔಷಧಿ-ಮತ್ತು ಸ್ಪಿರಿಟ್ ಅಥವಾ ಡೆಟಾಲ್ ಕ್ರಿಮಿನಾಶಕವನ್ನು ಹಚ್ಚಿದರೆ ಇನ್ನೂ ಹೆಚ್ಚಿನ ವೈರಾಣುಗಳು ನಾಶವಾಗುತ್ತವೆ.
7. ಮೆಣಸಿನಕಾಯಿ ಪುಡಿ, ಎಕ್ಕದ ಹಾಲು ಅಥವಾ ಎಲೆಗಳ ರಸ ಮುಂತಾದ ಉರಿಯುವ ಪದಾರ್ಥಗಳನ್ನು ಗಾಯಕ್ಕೆ ಲೇಪಿಸಬಾರದು. ಆದನ್ನು ಹಚ್ಚುವುದರಿಂದ ವೈರಾಣುಗಳು ಸಾಯುವ ಬದಲಾಗಿ ಹೆಚ್ಚಾಗಿ ಹರಡುತ್ತವೆ.
8. ಗಾಯವನ್ನು ತೊಳೆದ ನಂತರ ನಿಮಗೆ ಹತ್ತಿರವಿರುವ ಸಾರ್ಕಾರೀ ಆರೋಗ್ಯ ಕೇಂದ್ರಕ್ಕೆ ಹೋಗಿ ಇದರ ಬಗ್ಗೆ ತಿಳಿಯಿರಿ.
9. ಇತ್ತೀಚೆಗೆ ಹೊಸ ತಂತ್ರ ವಿಧಾನದಿಂದ ರೇಬೀಸ್ ಅನ್ನು ಚಿಕಿತ್ಸೆಯನ್ನು ಮಾಡಲಾಗುತ್ತದೆ. ಚರ್ಮದೊಳಕ್ಕೆ ಕೊಡುವ ಚುಚ್ಚುಮದ್ದು ಕಡಿಮೆ ಖರ್ಚಿನಲ್ಲಿ, ಸುಲಭವಾಗಿ ಆದರೆ ಪರಿಣಾಮಕಾರಿಯಾಗಿ ರೇಬೀಸ್ ಅನ್ನು ತಡೆಯಬಲ್ಲದು.





